ಅದು ಹತ್ತು ಹುದ್ದೆಗಳು ಇರಲಿ, 14 ಹುದ್ದೆಗಳು ಇರಲಿ, ನಾವೀಗ ಡಾಕ್ಟರ್ಸ್‌ನ್ನು ರೆಕ್ರೂಟ್ ಮಾಡಿಕೊಂಡಿದ್ದೇವೆ. ಅವರ ಪೋಲೀಸ್ ರಿಪೋರ್ಟ್ ಮತ್ತು ಮೆಡಿಕಲ್ ರಿಪೋರ್ಟ್ ಬಂದ ತಕ್ಷಣ ನಿಮಗೆಲ್ಲಾ ಡಾಕ್ಟರ್‌ಗಳ್ನು ಕೊಡುತ್ತೇವೆ.

ಪ್ರೌಢ ಶಾಲೆಗಳಲ್ಲಿ ಹಿಂದಿ ಶಿಕ್ಷಕರು ದೊರೆಯದಿರುವ ಬಗ್ಗೆ

1142- ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಹಿಂದಿ ವಿಷಯದಲ್ಲಿ ಕನಿಷ್ಟ 20ಅಂಕಗಳನ್ನು ತೆಗೆಯಬೇಕಾಗಿದ್ದು, ಆದರೆ ಹಿಂದಿ ಶಿಕ್ಷಕರೆ ಇಲ್ಲದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಆ) ಅನೇಕ ಪ್ರೌಢ ಶಾಲೆಗಳಲ್ಲಿ ಮಂಜೂರಾತಿ ಹುದ್ದೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಅರೆಕಾಲಿಕ ಹುದ್ದೆಗಳನ್ನು ಸಹ ತೆಗೆದುಕೊಳ್ಳಲು ಅವಕಾಶವಿಲ್ಲದಿರುವುದರಿಂದ, ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅದನ್ನು ಪರಿಗಣಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಕೆಲವು ಪ್ರೌಢಶಾಲೆಗಳಲ್ಲಿ ಪೂರ್ಣಕಾಲಿಕ ಹುದ್ದೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ತೊಂದರೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಪ್ರೌಢ ಶಾಲಾ ಮಟ್ಟದಲ್ಲಿ ಹಿಂದಿ ವಿಷಯದಲ್ಲಿ ಕಡ್ಡಾಯವಾಗಿ ಕನಿಷ್ಟ 20ಅಂಕಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದರೆ ಅಲ್ಲಿ ಮಂಜೂರಾಗಿರತಕ್ಕ ಹಿಂದಿ ಶಿಕ್ಷಕರ ಹುದ್ದೆಗಳು ಇಲ್ಲ, ಮತ್ತೆ ಹಿಂದಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವುದಕ್ಕೂ ಅವಕಾಶ ಇರುವುದಿಲ್ಲ ಇಂತಹ ಸಂದರ್ಭದಲ್ಲಿ ಹಿಂದಿ ವಿಷಯದಲ್ಲಿ ಅಕ್ಷರ ಜ್ಞಾನವನ್ನೇ ಕೊಡದ ಕಡ್ಡಾಯವಾಗಿ 20 ಅಂಕಗಳನ್ನು ಪಡೆಯುವುದು ಕಷ್ಟಕರವಾಗಿದೆ. ಆದ್ದರಿಂದ ಹಿಂದಿ ವಿಷಯದಲ್ಲಿ ಕಡ್ಡಾಯವಾಗಿ ಏನು 20 ಅಂಕಗಳನ್ನು ಪಡೆಯಬೇಕೆನ್ನುವ ನಿಯಮ ಇದೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, 19-6-89ರಲ್ಲಿ ನಾವು ರಾಜ್ಯದಲ್ಲಿ ಹೊಸ ತಾತ್ಕಾಲಿಕವಾದಂಥ ಭಾಷಾ ನೀತಿಯನ್ನು ತಂದಾಗ 8 ನೇ ತರಗತಿಯಿಂದ 10ನೇ ತರಗತಿಯವರೆಗೆ ತೃತೀಯ ಭಾಷೆಗೆ 100 ಅಂಕಗಳನ್ನು ನಿಗದಿಪಡಿಸಿದೆ. ಕನ್ನಡೇತರರು ಕನ್ನಡವನ್ನು ತೃತೀಯ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡಾಗ ಮತ್ತು ಹಿಂದಿ ಮಾತೃ ಭಾಷೆ ಅಲ್ಲದವರು ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡಾಗ 15 ಕೃಪಾ ಅಂಕಗಳನ್ನು ನೀಡತಕ್ಕಂಥ ಒಂದು ಧೋರಣೆ ನಾವು ಮಾಡಿದ್ದೇವೆ. ಈಗ ಕೆಲವು ಪ್ರೌಢ ಶಾಲೆಗಳಲ್ಲಿ ಪೂರ್ಣಕಾಲಿಕ ಹಿಂದಿ ಶಿಕ್ಷಕರ ಹುದ್ದೆಗಳು ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ನಾವು 1989-90ನೇ ಶೈಕ್ಷಣಿಕ ವರ್ಷದಿಂದ ಯಾವ ನೀತಿಯನ್ನು ಜಾರಿಗೆ ತಂದಿದ್ದೇವೆ ಅದರ ಪ್ರಕಾರ 8ನೇ ಕ್ಲಾಸ್ ಮತ್ತು 9ನೇ ಕ್ಲಾಸ್ ಇಲ್ಲಿ ಮಾತ್ರ ಬಂದಿದೆ. 10ನೇ ಕ್ಲಾಸ್‌ನಲ್ಲಿ ಬರಲಿಲ್ಲ. ಈ ಬಗ್ಗೆ ಅಧ್ಯಾಪಕರನ್ನು ಒದಗಿಸತಕ್ಕಂಥ ಕಾರ್ಯಕ್ರಮ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಹಿಂದಿಯನ್ನು ತೃತೀಯ ಭಾಷೆಯನ್ನಾಗಿ

ತೆಗೆದುಕೊಂಡಿದ್ದಾರೆ ಹಿಂದಿ ಮಾತೃ ಭಾಷೆ ಅಲ್ಲದವರು ಎಷ್ಟು ಎಂಬ ಬಗ್ಗೆ ಮಾಹಿತಿಗಳನ್ನು ತರಿಸುತ್ತಿದ್ದೇವೆ. ಬರುವ ವರ್ಷದಿಂದ ಈ ರೀತಿ ತೊಂದರೆಗಳು ಆಗದಂತೆ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ಇದ್ದಾಗಲೇ ವಿದ್ಯಾರ್ಥಿಗಳು ಮಾರ್ಕ್ಸ್‌ನ್ನು ತೆಗೆಯುವುದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದು ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಅರಿವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಿಂದಿನ ವಿಷಯದಲ್ಲಿ 20ಅಂಕಗಳನ್ನು ತೆಗೆದುಕೊಳ್ಳಬೇಕೆಂದು ಏನು ಕಡ್ಡಾಯ ಮಾಡಿದ್ದೀರಿ. ಎಲ್ಲೆಲ್ಲಿ ಟೀಚರ್ಸ್ ಇಲ್ಲದೆ ತೊಂದರೆಯಾಗಿದೆ ಎಂಬುವುದು ತಮಗೆ ಗೊತ್ತಿದೆ. ಟೀಚರ್ಸ್ ಇಲ್ಲದೆ ಹುಡುಗರು ಹಿಂದಿ ಭಾಷೆಯಲ್ಲಿ ಮಾರ್ಕ್ಸ್ ತೆಗೆಯುವುದು ಹೇಗೆ ಸಾಧ್ಯ ಹೇಳಿ? ಆ ಒಂದು ಸಬ್ಜಕ್ಟ್‌ನಲ್ಲಿ ಮಕ್ಕಳು ಫೇಲ್ ಆದರೆ ಅವರ ಭವಿಷ್ಯ ಹಾಳಾಗುತ್ತದೆ. ಆ ದೃಷ್ಟಿಯಿಂದ 20 ಮಾರ್ಕ್ಸ್‌ಗಳನ್ನು ತೆಗೆದುಕೊಳ್ಳಬೇಕೆಂದು ಏನು ಕಡ್ಡಾಯ ಮಾಡಿದ್ದೀರಿ ಅದನ್ನು ಮಕ್ಕಳ ಹಿತದೃಷ್ಟಿಯಿಂದ ವಾಪಸ್ ತೆಗೆದುಕೊಳ್ಳಲಿಕ್ಕೆ ಸಾಧ್ಯವೆ? ಏಕೆಂದರೆ, ಮೇಸ್ಟರ್‌ಗಳನ್ನೇ ಕೊಟ್ಟಿಲ್ಲ. ಮಕ್ಕಳು ಟೀಚರ್ಸ್ ಇಲ್ಲದೆ ಹಿಂದಿ ಅಕ್ಷರವನ್ನು ಹೇಗೆ ಕಲಿಯುತ್ತಾರೆ? ಪಾಠವನ್ನೇ ಮಾಡದೆ ಹಿಂದಿ ಪರೀಕ್ಷೆಯಲ್ಲಿ ಬರೆದು ಅವರು 20 ಅಂಕಗಳನ್ನು ಗಳಿಸಲಿಕ್ಕೆ ಸಾಧ್ಯವೇ ಹೇಳಿ? ಆದ್ದರಿಂದ 20 ಅಂಕಗಳನ್ನು ತೆಗದುಕೊಳ್ಳಬೇಕೆಂದು ಏನು ಕಡ್ಡಾಯ ಮಾಡಿದ್ದೀರಿ ದಯಮಾಡಿ ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಅಧ್ಯಾಪಕರ ಕೊರತೆ ಮತ್ತು ಅಧ್ಯಾಪಕರ ಅವಶ್ಯಕತೆ, ಇದನ್ನು ಹೊಂದಿಕೊಂಡು ಯಾವುದೇ ಶಿಕ್ಷಣ ನೀತಿಯನ್ನು ಮಾಡುವುದಕ್ಕಾಗುವುದಿಲ್ಲ. ಅಧ್ಯಾಪಕರು ಇಲ್ಲದಿದ್ದರೆ ಅಧ್ಯಾಪಕರನ್ನು ಒದಗಿಸತಕ್ಕಂಥ ಕರ್ತವ್ಯ ಸರ್ಕಾರದಲ್ಲಿದೆ. ಆದ್ದರಿಂದ, ಭಾಷಾ ನೀತಿ ಬಗ್ಗೆ ವ್ಯತ್ಯಾಸವಿದ್ದರೆ ನಾವು ವಿಚಾರ ಮಾಡೋಣ. ಆದರೆ, ಅಧ್ಯಾಪಕರು ಇಲ್ಲವೆಂಬ ಒಂದೇ ಒಂದು ನೆವದಿಂದ ಭಾಷಾನೀತಿಯನ್ನು ಬದಲಾವಣೆ ಮಾಡುವುದು ಯೋಗ್ಯವಾಗುತ್ತಿಲ್ಲ. ಆದ್ದರಿಂದ ನಾನು ಈಗಾಗಲೇ ಹೇಳಿದ್ದೇನೆ, ನಾವು ಮಾಹಿತಿಗಳನ್ನು ತರಿಸುತ್ತಿದ್ದೇನೆ. ಎಲ್ಲೆಲ್ಲಿ ಅಧ್ಯಾಪಕರ ಕೊರತೆ ಇದೆಯೋ ಅದನ್ನು ನೀಗಿಸಲಿಕ್ಕೆ ಬರುವ ಅಕಾಡೆಮಿಕ್ ವರ್ಷದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಅಧ್ಯಾಪಕರು ಇಲ್ಲ ಎನ್ನುವ ಒಂದೇ ಕಾರಣಕ್ಕೆ ಭಾಷಾ ನೀತಿಯಲ್ಲಿ ಹಿಂಜರಿತ ಸಾಧ್ಯವಿಲ್ಲ. ಅದನ್ನು ಮಾಡುವುದು ನಮಗೆ ಯೋಗ್ಯವೆಂದು ಕಾಣುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ಒಂದು ಭಾಷೆಯನ್ನು ಮಕ್ಕಳ ಮೇಲೆ ಹೇರಿ ಕಲಿಸಲಿಕ್ಕೆ ಪ್ರಯತ್ನ ಪಟ್ಟರೆ ಮಕ್ಕಳ ಭವಿಷ್ಯದಲ್ಲಿ ಎಷ್ಟು ತೊಂದರೆಯಾಗುತ್ತದೆಂದು ಆಲೋಚನೆ ಮಾಡಬೇಕು. ಈಗ ಮೇಸ್ಟ್ರುಗಳನ್ನು ಒದಗಿಸದೆ ಹಿಂದಿ ಕಲಿಯಿರಿ ಎಂದರೆ ಹೇಗೆ ಸಾಧ್ಯ ಹೇಳಿ? ಮೇಸ್ಟ್ರುಗಳನ್ನು ಒದಗಿಸಿಕೊಟ್ಟು ಹಿಂದಿಯನ್ನು ಕಲಿಯಿರೆಂದು ಒತ್ತಾಯ ಮಾಡಿ. ಹಿಂದಿಯಲ್ಲಿ 20 ಅಂಕಗಳನ್ನು ತೆಗೆದುಕೊಳ್ಳಲಿಲ್ಲವೆಂದರೆ ಅವರು ಫೇಲ್ ಆಗುತ್ತಾರೆ. ಆಗ ಅವರ ಭವಿಷ್ಯ ಹಾಳಾಗುತ್ತದೆ. ಆ ದಿಕ್ಕಿನಲ್ಲಿ ತಾವು ಏಕೆ ಆಲೋಚನೆ ಮಾಡಲಿಲ್ಲ? ತಾತ್ಕಾಲಿಕವಾಗಿಯಾದರೂ ಮೇಸ್ಟ್ರುಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಏಕೆ ಅವಕಾಶ ಕೊಡಲಿಲ್ಲ? ಹಿಂದಿಯನ್ನು ಕಲಿಸಬೇಕೆಂದರೆ ತಾತ್ಕಾಲಿಕವಾಗಿಯಾದರೂ ಮೇಸ್ಟ್ರುಗಳನ್ನು ನೇಮಕ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇದರಲ್ಲಿ ಕಡ್ಡಾಯ ಏನಿಲ್ಲ. ಭಾಷೆಯನ್ನು ಆಯ್ಕೆ ಮಾಡುವುದು ಬಿಡುವುದು ವಿದ್ಯಾರ್ಥಿಗಳಿಗೆ ಬಿಟ್ಟಿದ್ದು. ಇದರಲ್ಲಿ ಕಡ್ಡಾಯದ ಪ್ರಶ್ನೆ ಬರುವುದಿಲ್ಲ. ಅಧ್ಯಾಪಕರ ಕೊರತೆಯ

ವಿಷಯವನ್ನು ಪ್ರಧಾನವಾಗಿ ಇಟ್ಟುಕೊಂಡು ಭಾಷಾ ನೀತಿಯನ್ನು ಬದಲಾವಣೆ ಮಾಡಬೇಕುನ್ನುವುದು ಸರಿಯಲ್ಲ. ಭಾಷಾ ನೀತಿಯಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ದಯಮಾಡಿ ಅದರ ಬಗ್ಗೆ ಚರ್ಚೆ ಮಾಡೋಣ, ವಿಚಾರ ಮಾಡೋಣ ಆದರೆ ಇದರಲ್ಲಿ ಹಿಂದಿ ಹೇರಿಕೆ ಮತ್ತೊಂದು ಹೇರಿಕೆ ಯಾವುದೂ ಇರುವುದಿಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ರಾಜ್ಯ ಸಾರಿಗೆ ಬಸ್ಸುಗಳು ಸಕಾಲದಲ್ಲಿ ಹೊರಡದಿರುವುದು.

1131 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳನ್ನು ಸರಿಯಾಗಿ ನಡೆಸದ ಕಾರಣ ಪ್ರಯಾಣಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸೇಡಂ ಭಾಗದ ಮುಧೋಳ, ಕೋಲಕುಂಡಮೋತಕಪಲ್ಲಿ ಮಾರ್ಗವಾಗಿ ಗುರುಮಿಟಕಾಲ್ ಹಾಗೂ ಕೋಲಕುಂಡನಾಚವಾರ್ ಮಾರ್ಗವಾಗಿ ಗುರುಮಿಟಕಾಲ್ ಮತ್ತು ಯಾದಗಿರಿ ಕೊಡ್ಲಾ ಮಾರ್ಗವಾಗಿ ಸೇಡಂ ಗುಲ್ಬರ್ಗಾ ಅದೇ ಪ್ರಕಾರ ಗುಲ್ಬರ್ಗ ನಾಡೇಪಲ್ಲಿ, ಖಾನಗುಡ್ಡ ಮಾರ್ಗವಾಗಿ ನಾರಾಯಣ ಪೇಟೆ ಇತ್ಯಾದಿ ಕಡೆ ಹೋಗುವ ಬಸ್‌ಗಳ ವೇಳೆಯಲ್ಲಿ ನಡೆಸದೆ ಪ್ರಯಾಣಿಕರಿಗೆ ತೊಂದರೆಯಾಗಿ ಮತ್ತು ಅಂಚೆ ಸಹ ಸಮಯಕ್ಕೆ ಸರಿಯಾದ ವೇಳೆಯಲ್ಲಿ ಮುಟ್ಟದೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ಈಗಲಾದರೂ ಸಹ ಈ ಭಾಗದಲ್ಲಿ ಬಸ್‌ಗಳನ್ನು ಸಮಯಕ್ಕೆ ಸರಿಯಾಗಿ ನಡೆಸುವ ವ್ಯವಸ್ಥೆ ಮಾಡಲು ಸರ್ಕಾರ ವ್ಯವಸ್ಥೆ ಮಾಡಬಹುದೆ?

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ನಿಯಮಿತ ವೇಳೆಗೆ ಬರಲಾಗದಿದ್ದಕ್ಕೆ ರಸ್ತೆಯು ಸರಿ ಇಲ್ಲದ ಕಾರಣದಿಂದ ನಿಯಮಿತೆಯನ್ನು ಉತ್ತಮಪಡಿಸುವ ಸಲುವಾಗಿ ರಸ್ತೆಗಳನ್ನು ದುರಸ್ಥಿ ಮಾಡಿ ಮತ್ತು ಮೇಲುಹೊದಿಕೆ ಹಾಕಿಸುವಂತೆ ಲೋಕೋಪಯೋಗಿ ಇಲಾಖೆಯವರನ್ನು ಕೋರಲಾಗಿದೆ.

ಈ) ನಿಯಮಿತ ವೇಳೆಯಲ್ಲಿ ಕಾಪಾಡಿಕೊಳ್ಳುವಂತೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯವರಿಗೆ ಪರಿಶೀಲಿಸಿ ಸಾರಿಗೆ ವ್ಯವಸ್ಥೆಯನ್ನು ನೀಡುವಂತೆ ಸೂಚಿಲಾಗಿದೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಮಾನ್ಯ ಸಭಾಧ್ಯಕ್ಷರೇ, ನಾನು ಗುಲ್ಬರ್ಗಾ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಸರಿಯಾದ ವೇಳೆಯಲ್ಲಿ ನಡೆಸದೇ ಇರುವುದರಿಂದ ಪ್ರಮಾಣಿಕರಿಗೆ ತೊಂದರೆಯಾಗಿ ಮತ್ತು ಅಂಚೆ ಸಹ ಸಮಯಕ್ಕೆ ಸರಿಯಾದ ವೇಳೆಯಲ್ಲಿ ಮುಟ್ಟದೇ ಅನಾನುಕೂಲ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದರ ಬಗ್ಗೆ ಕೈಗೊಂಡಿರುವ ಕ್ರಮ ಏನು ಎಂದು ಕೇಳಿದರೆ ನಿಯಮಿತ ವೇಳೆಗೆ ಬಸ್ ಬರಲಾಗದಿದ್ದುದ್ದಕ್ಕೆ ರಸ್ತೆ ಸರಿ ಇಲ್ಲದಿರುವುದು ಎಂದು ಕಾರಣ ತಿಳಿಸಿದ್ದಾರೆ. ರಸ್ತೆ ಸರಿ ಇಲ್ಲದಿದ್ದರೆ ಬಸ್ ಹೋಗಿ ಬರುವ ವೇಳೆಯಲ್ಲಿ ವಿಳಂಬ ಆಗಬಹುದು, ಆದರೆ ಬಸ್‌ಗಳು ಡಿಪೋದಿಂದ 2-3 ತಾಸು ಲೇಟಾಗಿ ಬಿಡುತ್ತವೆ. ಅಲ್ಲದೆ 8-8 ದಿವಸ ಆದರೂ ಸಹ ಆ ರಸ್ತೆಯಲ್ಲಿ ಬಸ್ ಬರುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ಆಗಬಹುದಾದಂತಹ ತೊಂದರೆಯನ್ನು ಗಮನಿಸಿ